
ನವಸಾಕ್ಷರ ಪುಸ್ತಕ ಮಾಲೆ ೪೭

ಚುನಾವಣೆಗಳು

ಟಿ. ಆರ್. ನಾಗಪ್ಪ



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ - ೪೬

ಚುನಾವಣೆಗಳು

ಟಿ. ಆರ್. ನಾಗಪ್ಪ

ಮಾತೆಂಬುದು ಜ್ಯೋತಿರ್ಲಿಂಗ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

CHUNAVANEGALU : By T. R. Nagappa. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಚುನಾವಣೆಗಳು

"ಅಜ್ಜಪ್ಪ, ಅಜ್ಜಪ್ಪ, ಬಾಗಿಲು " ಎಂದು ಬಾಗಿಲು ತಟ್ಟಿದ ರಂಗಣ್ಣ.

ಅಜ್ಜಪ್ಪನ ಹೆಂಡತಿ ಒಳಗಿನಿಂದ ಬಂದು ಬಾಗಿಲು ತೆಗೆದಳು. ರಂಗಣ್ಣನ ನೋಡಿ ಹುಸಿನಗೆ ನಗುತ್ತಾ "ಅವರು ಇಲ್ಲಣ್ಣಾ" ಎಂದಳು.

"ಎಲ್ಲಿಗೆ ಹೋಗಿದ್ದಾನೆ" ರಂಗಣ್ಣ ಕೇಳಿದ.

"ಅದೇನೋ ಎಲೆಕ್ಷನ್ ಅಂತೆ. ಮನೆಗೇ ಬರೋಲ್ಲ. ಹೊತ್ತಾರೆ ಮುಂಚೆ ಬಂದರೆ ಸಿಗ್ತಾರೆ"

ಮಾರನೆಯ ದಿನ ಹೊತ್ತಿಗೆ ಮುಂಚೆ ರಂಗಣ್ಣ ಅಜ್ಜಪ್ಪನ ಮನೆಗೆ ಬಂದ. "ಏನಣ್ಣಾ ಅಪರೂಪ" ಕೇಳಿದ ರಂಗಣ್ಣ.

" ನೋಡಣ್ಣಾ ನಾಡಿದ್ದು ನಮ್ಮ ಸೊಸೈಟಿ ಚುನಾವಣೆ. ನಾನೂ ನಿಂತಿದ್ದೀನಿ. ಸರಿ. ನಿನ್ನ ಓಟು ನನಗೆ"



ರಂಗಣ್ಣ ಅಜ್ಜಪ್ಪನನ್ನು ಓಟು ಕೇಳುತ್ತಿರುವುದು

"ಅಣ್ಣ, ನಾನು ಮೆಂಬರಿಲ್ಲ."

"ಯಾರು ನೋಡೋರು. ನಾನು ಓಟು ಮಾಡಿಸ್ತೀನಿ. ಜನರಲ್ ಎಲೆಕ್ಸನ್‌ನಲ್ಲಿ ಯಾರ್‍ಯಾರೊ ಇನ್ನೊಬ್ಬರ ಹೆಸರಿನಲ್ಲಿ ಓಟುಹಾಕ್ತಾರೆ. ಯಾರನ್ನು ಹಿಡಿದವ್ರೆ? ನನಗೂ ಸಾಕಾಗಿದೆ ಈ ಚುನಾವಣೆ ಸಹವಾಸ"

" ಏಕೆ ಅಷ್ಟು ಬೇಜಾರು? ನಾನು ಒಂದು ಸುದ್ದಿ ಕೇಳಿದೆ. ಇನ್ನು ಮುಂದೆ ಇನ್ನೊಬ್ಬರ ಹೆಸರಿನಲ್ಲಿ ಓಟು ಮಾಡಲಿಕ್ಕೆ ಆಗಲ್ಲ. ಸಾವಿರದ ಒಂಬೈನೂರ ತೊಂಬತ್ತೈದರಿಂದ ಮತದಾರರಿಗೆ ಗುರುತಿನ ಚೀಟಿ ಕೊಡುವರಂತೆ. ಅದರಲ್ಲಿ ಅವರ ಫೋಟೊ ಇರುವುದಂತೆ. ಇನ್ನೊಂದು ಸ್ವಾರಸ್ಯ. ಡೆಲ್ಲಿ ಸರಕಾರ ಸಾವಿರದ ಒಂಬೈನೂರಾ

ಎಂಬತ್ತೆಂಟು ಹಾಗೂ ಎಂಬತ್ತೊಂಬತ್ತರಲ್ಲಿ ಓಟುಮಾಡುವ ಯಂತ್ರ ಕೊಂಡಿತ್ತು. ಅದಕ್ಕೆ ಎಪ್ಪತ್ತೈದು ಕೋಟಿ ರೂಪಾಯಿ ಖರ್ಚು."

"ಹೌದು, ನೀನು ಹೇಳಿದ್ದು ನಿಜ. ಓಟಿನ ಯಂತ್ರದಿಂದ ಮೋಸಮಾಡಲಿಕ್ಕೆ ಆಗದು. ಆ ಯಂತ್ರಗಳು ಧೂಳು ಕುಡಿಯುತ್ತಾ ಎಲ್ಲೋ ಬಿದ್ದಿರಬೇಕು. ರಾಜಕೀಯ ಪಕ್ಷಗಳು ಈ ಏರ್ಪಾಡಿಗೆ ಸುಲಭವಾಗಿ ಒಪ್ಪೊಲ್ಲ. ಚುನಾವಣೆ ಒಂದೇ, ಎರಡೇ -ವರ್ಷವೆಲ್ಲಾ ಚುನಾವಣೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತು, ಜಿಲ್ಲಾ ಪಂಚಾಯಿತಿ. ಇಲ್ಲಿಗೆ ಮುಗಿಯಲಿಲ್ಲ. ಏತನ್ಮಧ್ಯೆ ಸೊಸೈಟಿ, ರೆಗ್ಯೂಲೇಟೆಡ್ ಮಾರುಕಟ್ಟೆ ಇವುಗಳು, ವಿಧಾನ ಪರಿಷತ್ತಿನ ಚುನಾವಣೆ ಬೇರೆ. ಇದಕ್ಕೆಲ್ಲಾ ಓಡಾಡಬೇಕು. ಮನೇಲಿ ಸುಮ್ಮನೆ ಕೂತಿದ್ರು ಬಿಡಾಕಿಲ್ಲ."

"ಅದು ಸರಿ, ಜನ ಸೇವೆ ಸುಮ್ಮನೆ ಆಗುತ್ತಾ. ಹೆಚ್ಚು ಕಡಿಮೆ ಚುನಾವಣೆ ನಿನ್ನ ಕಸಬು ಆಗೈತಿ. ಈಗ ಇನ್ನೊಂದು ತಿಂಗಳಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಅಂತ. ಜನತಾ ಪಕ್ಷ ಇದ್ದಾಗ ಪಂಚಾಯಿತಿಗೆ ಚುನಾವಣೆ ಆಗಿತ್ತು. ಈಗ ಗ್ರಾಮ ಪಂಚಾಯಿತಿ ಕಾನೂನು ಹೊಸದು ಬಂದಿದೆಯಂತೆ. ಒಬ್ಬೊಬ್ಬ ಮುಖ್ಯಮಂತ್ರಿ ಬಂದಾಗಲೂ ಏನಾದರೂ ಬದಲಾವಣೆ ಮಾಡ್ತಾರೆ. ಅದಿರಲಿ. ಹೊಸ ಕಾನೂನನ್ನು ಚೆನ್ನಾಗಿ ತಿಳೀಬೇಕು. ನಾನೊಬ್ಬನೇ ಅಲ್ಲ ಊರಿನ ಎಲ್ಲರೂ ತಿಳೀಬೇಕು. ತಿಳಿದು ಒಳ್ಳೇ ಪಂಚಾಯಿತಿ ಮಾಡಬೇಕು. ಅದಕ್ಕೆ ಪ್ರತಿ ಸೋಮವಾರ ಸಂಜೆ ಸೇರೋಣ. ಮೂಲಿ ಮನೆ ರಂಗಣ್ಣ ಚುನಾವಣೆ ವಿಷಯ ಚೆನ್ನಾಗಿ ಬಲ್ಲ. ಅದರಲ್ಲೇ ಅರಿತು ನುರಿತವನು. ಅವನು ಚುನಾವಣೆ ವಿಷಯ ಎಲ್ಲರಿಗೂ ತಿಳಿಸಬೇಕು" ಎಂದು ಹೇಳಿದ.

ಸೋಮವಾರ ರಾತ್ರಿ ಎಂಟು ಗಂಟೆಗೆ ಊರಿನ ಜನ ಚಾವಡಿಯಲ್ಲಿ ಸೇರಿದರು. ಮೂಲೆಮನೆ ರಂಗಣ್ಣನಿಗೆ ಜನರ ಗುಂಪು ನೋಡಿ ಆನಂದ ಆಯಿತು. "ನೀವು ಸೇರಿದ್ದು ಸಂತೋಷ. ಚುನಾವಣೆ ವಿಷಯ ತಿಳಿಯಲು ಸೇರಿದ್ದೀರಿ".



ಚುನಾವಣೆಯ ಬಗ್ಗೆ ತಿಳಿದುಕೊಳ್ಳಲು ಚಾವಡಿಯಲ್ಲಿ ಸಭೆ ಸೇರಿರುವುದು

" ಹೌದು, ನಮ್ಮ ಚುನಾವಣೆ ಅಲ್ಲವೆ ? ಅಂದರೆ ನಮ್ಮ ಗ್ರಾಮ ಪಂಚಾಯಿತಿ ಚುನಾವಣೆ. ಈಗ ಜಾರಿಗೆ ಬಂದಿರುವುದು ಹೊಸಕಾನೂನು. ಅದನ್ನು ಚೆನ್ನಾಗಿ ತಿಳೀಬೇಕು. ವಸಿ ಚೆನ್ನಾಗಿ ತಿಳಿಸಣ್ಣ" ಎಂದು ಸಭೆಯಿಂದ ರಹೀಂ ಎದ್ದು ಹೇಳಿದ.

" ಆಗಲಿ, ನೀವು ಸಮಾಧಾನದಿಂದ ಕೇಳುವಿರಿ ಎಂಬುದು ನನಗೆ ಗೊತ್ತು".

"ನೀನು ಹೇಳುವುದು ನಮ್ಮ ಒಳ್ಳೇದಕ್ಕೆ ಅಲ್ವಾ " ಎಂದು ಮಾತು ಸಭೆಯಿಂದ ಕೇಳಿ ಬಂತು.

ರಂಗಣ್ಣ ಹೀಗೆ ಶುರುಮಾಡಿದ. ನಿಮಗೆಲ್ಲಾ ಸ್ವರಾಜ್ಯ ಬಂದಿದ್ದು ಗೊತ್ತು.

ನಿಮ್ಮಲ್ಲಿ ಕೆಲವರು ಅದಕ್ಕಾಗಿ ಜೈಲಿಗೆ ಹೋಗಿದ್ರಿ. ಈಗ ಇರೋದು ನಮ್ಮ ಸರಕಾರ ಅಂದರೆ ಪ್ರಜಾರಾಜ್ಯ. ನಮ್ಮನ್ನು ಆಳುತ್ತಿದ್ದ ರಾಜರು ಈಗಿಲ್ಲ. ಅದರಿಂದ ಒಂದುರೀತಿ ನಾವೇ ರಾಜರು. ನಮ್ಮನ್ನು ನಾವೇ ಒಂದು ರೀತಿಯಲ್ಲಿ ಆಳ್ಕೊತೀವಿ. ಆದರೆ ನಾವು ಸರಕಾರದ ಆಡಳಿತದಲ್ಲಿ ನೇರವಾಗಿ ಪಾಲುಗೊಳ್ಳಲು ಸಾಧ್ಯವಿಲ್ಲ. ಆದರೆ ನಮ್ಮನ್ನು ಆಳುವ ಸರಕಾರ ನಮ್ಮ ಹತೋಟಿಯಲ್ಲಿ ಇರಬೇಕು. ಆದ್ದರಿಂದ ಸರಕಾರ ನಡೆಸಲು ದಕ್ಷರು ಮತ್ತು ಯೋಗ್ಯರು ಆದವರನ್ನು ಪ್ರತಿನಿಧಿ ಆಗಿ ಆಯ್ಕೆ ಮಾಡುತ್ತೇವೆ. ಅದೇ ಚುನಾವಣೆ. ಆಳಿಸಿಕೊಳ್ಳುವವರೂ ನಾವೇ ಮತದಾರರೂ ನಾವೇ. ಆಳುವವರು ಬೇರೆ. ಅವರೂ ನಮ್ಮ ಅಣ್ಣತಮ್ಮಂದಿರೇ. ಆಳುವವರನ್ನು ಆಳಿಸಿಕೊಳ್ಳುವವರು ಆಯ್ಕೆ ಮಾಡುವುದೇ ಚುನಾವಣೆ.

ಅಧಿಕಾರ ಸ್ಥಾನ ಇರಬಹುದು. ಅಥವಾ ಸಂಘದ ಮೆಂಬರುತನ ಇರಬಹುದು. ಅಲ್ಲಿಯ ಅಧಿಕಾರ ಸ್ಥಾನಕ್ಕೆ ಅಥವಾ ಮೆಂಬರಾಗಿ ಆರಿಸುವುದೇ ಚುನಾವಣೆ. ಈ ಚುನಾವಣೆ ಹಲವಾರು ರೀತಿ. ಮತದಾರನು ತನ್ನ ಕೈ ಎತ್ತಬಹುದು. ಇಲ್ಲವೆ ಧ್ವನಿಮತದ ಮೂಲಕ ತನ್ನ ಅಭಿಪ್ರಾಯ ತಿಳಿಸಬಹುದು. ಅಥವಾ ಗೋಪ್ಯವಾಗಿ ಅಂದರೆ ಗುಟ್ಟಾಗಿ ಮತ ನೀಡಬಹುದು. ಈಗಿನ ಪದ್ಧತಿ ಗುಪ್ತ ಮತದಾನ ಪದ್ಧತಿ. ಚುನಾವಣೆ ನಡೆಸಲು ನಾವು ನಿಯಮಗಳನ್ನು ಮಾಡುತ್ತೇವೆ. ಅವುಗಳನ್ನು ಅನುಸರಿಸಿ ಮತದಾನ ನಡೆಯತಕ್ಕದ್ದು.

ಚುನಾವಣೆ ಪ್ರಜಾರಾಜ್ಯದ ಅಡಿಗಲ್ಲು. ಚುನಾವಣೆ ಇಲ್ಲದೆ ಪ್ರಜಾರಾಜ್ಯ ಆಗದು. ಪ್ರಜಾರಾಜ್ಯದ ಯಶಸ್ಸಿಗೆ ಚುನಾವಣೆ ಅಗತ್ಯ. ಪ್ರಜಾರಾಜ್ಯ ಮತ್ತು ಚುನಾವಣೆ ಒಂದೇ ನಾಣ್ಯದ ಎರಡು ಮುಖಗಳು. ಪ್ರಜಾರಾಜ್ಯದಲ್ಲಿ ಪ್ರಜೆಯೇ ಪ್ರಭು. ಆತ ವಿವೇಕವಾಗಿ ಮತದಾನ ಮಾಡತಕ್ಕದ್ದು. ಆಗ ಯೋಗ್ಯರು ಮತ್ತು ದಕ್ಷರು ಆಯ್ಕೆ ಆಗುವರು. ಅದರಿಂದ ಒಳ್ಳೆಯ ಸರಕಾರ ಮತ್ತು ಒಳ್ಳೆಯ ಕಾರ್ಯ ನಿರೀಕ್ಷಿಸಬಹುದು.

ಮನು ಎಂಬ ರಾಜನ ಹೆಸರನ್ನು ಕೇಳಿದ್ದೀರಿ. ಆತ ಧರ್ಮಶಾಸ್ತ್ರವನ್ನು ರಚಿಸಿದ ಎಂದು ಹಿರಿಯರು ಹೇಳುವರು. ಅವನನ್ನು ಜನರೇ ರಾಜನನ್ನಾಗಿ ಮಾಡಿದರು. ಆಳುವ ಹಕ್ಕು ದೈವದತ್ತ, ಆದರೆ ಅದು ಆಳಿಸಿಕೊಳ್ಳುವವರ ಸಮ್ಮತಿಗೆ ಒಳಪಟ್ಟಿರಬೇಕು ಎಂಬ ಭಾವನೆ ಇತ್ತು. ಮಹಾಭಾರತದಲ್ಲಿ ಗ್ರಾಮಪಂಚಾಯಿತಿ ವ್ಯವಸ್ಥೆ ತನ್ನದೇ ಆದ ರೀತಿಯಲ್ಲಿ ಇತ್ತು. ಅದಕ್ಕೆ ಮಹಾಭಾರತದ ಶಾಂತಿಪರ್ವದಲ್ಲಿ ಉಲ್ಲೇಖ ಇದೆ. ಈ ಅಂಶ ಭೀಷ್ಮ ಮತ್ತು ಯುಧಿಷ್ಠಿರನ ಸಂವಾದದಿಂದ ವ್ಯಕ್ತವಾಗುವುದು.

ರಾಮನನ್ನು ಯುವ ರಾಜನನ್ನಾಗಿ ಮಾಡಲು ದಶರಥ ಇಷ್ಟಪಟ್ಟ. ಆಗ ತನ್ನ ಅಭಿಪ್ರಾಯಕ್ಕೆ ಪುರಪ್ರಮುಖರಿಂದ ಮನ್ನಣೆ ಪಡೆದ. ಮುಖ್ಯವಾದ ವಿಚಾರಗಳಲ್ಲಿ ಪ್ರಜೆಗಳ ಅಭಿಪ್ರಾಯ ಪಡೆಯುವುದು ಆಗಲೂ ಪ್ರಚಲಿತವಾಗಿತ್ತು ಎಂಬ ಅಂಶ ಇದರಿಂದ ವ್ಯಕ್ತವಾಗುವುದು.

ಕೌಟಿಲ್ಯ ಹೆಸರಾಂತ ವ್ಯಕ್ತಿ. ಅವನು ಅರ್ಥಶಾಸ್ತ್ರ ಎಂಬ ವಿಚಾರದಲ್ಲಿ ಒಂದು ಗ್ರಂಥ ರಚಿಸಿರುವನು. ಅದರಲ್ಲಿ ಗ್ರಾಮ ಸಂಘಗಳ ಬಗ್ಗೆ ವರ್ಣನೆ ಇದೆ. ಅಲೆಕ್ಸಾಂಡರ್ ಭಾರತಕ್ಕೆ ದಂಡೆತ್ತಿ ಬಂದಿದ್ದ. ಆಗ ಭಾರತದಲ್ಲಿ ಗಣರಾಜ್ಯ ಇತ್ತು ಎಂಬುದಾಗಿ ಗ್ರೀಕ್ ಲೇಖಕರು ಹೇಳಿದ್ದಾರೆ. ಮೆಗಾಸ್ತನೀಸ್ ಚೀನದೇಶದ ರಾಯಭಾರಿ. ಅವನು ಭಾರತದ ಗ್ರಾಮ ಪಂಚಾಯಿತಿಗಳ ಬಗ್ಗೆ ಸೊಗಸಾದ ವರ್ಣನೆ ಮಾಡಿದ್ದಾನೆ. ಒಂದು ಕಾಲಕ್ಕೆ ಗ್ರಾಮ ಪಂಚಾಯಿತಿಗಳು ಜನಪ್ರಿಯ ಆಗಿದ್ದವು. ದಕ್ಷತೆಯಿಂದ ಕೆಲ ಸಮಾಡುತ್ತಿದ್ದವು. ಬ್ರಿಟಿಷರ ಆಳ್ವಿಕೆಯಲ್ಲಿ ಪಂಚಾಯಿತಿರಾಜ್ಯ ತೃಪ್ತಿಕರವಾಗಿ ಮುಂದುವರಿಯಲಿಲ್ಲ. ಹಿಂದಿದ್ದ ಗ್ರಾಮಪಂಚಾಯಿತಿಗಳ ರೀತಿಯನ್ನು ಮತ್ತೆ ಜಾರಿಗೆ ತರಬೇಕು. ಅದಕ್ಕೆ ಗ್ರಾಮಸ್ಥರು ಓದು ಬರಹ ಕಲಿತು ತಿಳಿವಳಿಕೆ ಪಡೆಯಬೇಕು. ತಿಳಿವಳಿಕೆ ಉಳ್ಳ ಮಂದಿ ಗ್ರಾಮಪಂಚಾಯಿತಿಗಳನ್ನು ಚೆನ್ನಾಗಿ ನಡೆಸಿಯಾರು.

ಇಂದು ಭಾರತದಲ್ಲಿ ಹದಿನೆಂಟು ವಯಸ್ಸಿನವರು ಮತದಾರರು. ಗಂಡಸರು ಮತ್ತು ಹೆಂಗಸರು ಎಂಬ ಬೇಧವಿಲ್ಲ. ಈ ವಿಷಯದಲ್ಲಿ ಭಾರತವನ್ನು ಮೆಚ್ಚತಕ್ಕದ್ದೇ. ನಮ್ಮನ್ನು ಆಳಿದವರು ಬ್ರಿಟಿಷರು. ಅವರ ದೇಶದಲ್ಲಿ ಗಂಡಸರಿಗೆ ಮತದಾನದ ಹಕ್ಕು ಮೊದಲು ದೊರೆಯಿತು. ಆದರೆ ಮಹಿಳೆಯರು ಮತದಾನದ ಹಕ್ಕು ಪಡೆಯಲು ತೊಂಬತ್ತು ವರ್ಷ ಹೆಣಗಬೇಕಾಯಿತು. ಅಮೇರಿಕ, ಫ್ರಾನ್ಸ್, ಸ್ವೀಡನ್ ಮುಂದುವರಿದ ದೇಶಗಳು. ಅಮೆರಿಕದಲ್ಲಿ ಗಂಡಸರ ಜೊತೆಗೆ ಹೆಂಗಸರು ಮತದಾನದ ಹಕ್ಕನ್ನು ಪಡೆಯಲಿಲ್ಲ. ಮಹಿಳೆಯರು ಮತದಾನದ ಹಕ್ಕನ್ನು ಎಂಬತ್ತು ವರ್ಷಗಳ ನಂತರ ಪಡೆದರು. ಫ್ರಾನ್ಸಿನಲ್ಲಿ ಮಹಿಳೆಯರು ಅರವತ್ತೊಂಬತ್ತು ವರ್ಷಗಳ ಕಾಲ ಹೋರಾಡಿ ಮತದಾನದ ಹಕ್ಕನ್ನು ಪಡೆದರು. ಸ್ವೀಡನ್‌ನಲ್ಲಿ ಮಹಿಳೆಯರಿಗೆ ಇಂದಿಗೂ ಮತದಾನದ ಹಕ್ಕು ದೊರೆತಿಲ್ಲ. ಆದರೆ ಭಾರತದಲ್ಲಿ ಹೀಗೇನೂ ಆಗಲಿಲ್ಲ. ಗಂಡಸರೊಂದಿಗೆ ಹೆಂಗಸರು ಸಹ ಮತದಾನದ ಹಕ್ಕು ಪಡೆದರು. ಇದು ಮೆಚ್ಚುವ ಸಂಗತಿ ಅಲ್ಲವೆ ?

ಇಂದು ಗ್ರಾಮೀಣ ಹಂತದಿಂದ ರಾಷ್ಟ್ರಮಟ್ಟದವರೆಗೆ ವಿವಿಧ ಹಂತಗಳಲ್ಲಿ ಓಟುಮಾಡುವ ಹಕ್ಕು ಭಾರತೀಯ ಪ್ರಜೆಗೆ ದೊರೆತಿದೆ. ಆದ್ದರಿಂದ ಈ ಪವಿತ್ರ ಹಕ್ಕನ್ನು ಚಲಾಯಿಸಿದರೆ ಸಾಲದು. ಅದನ್ನು ನಿರಂತರವಾಗಿ ಕಾಪಾಡಿಕೊಂಡು ಬರಬೇಕು. ಮತದಾರರ ಪಟ್ಟಿ ಆಗಾಗ್ಗೆ ಪರಿಷ್ಕಾರ ಆಗುವುದು. ಮತಪಟ್ಟಿಯನ್ನು ಪಂಚಾಯಿತಿ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸುವರು. ಆಗ ಪೌರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು. ಆತನ ಹೆಸರು ಮತದಾರನ ಪಟ್ಟಿಯಲ್ಲಿ ಇಲ್ಲದೆ ಇರಬಹುದು. ಆಗ ಸಂಬಂಧಪಟ್ಟ ನಾಗರೀಕನು ತನ್ನ ಹೆಸರನ್ನು ಮತದಾರನ ಪಟ್ಟಿಯಲ್ಲಿ ಸೇರಿಸುವಂತೆ ಸಂಬಂಧಪಟ್ಟ ಅಧಿಕಾರಿಗೆ ಅರ್ಜಿಸಲ್ಲಿಸತಕ್ಕದ್ದು. ಆಗ ಅವರು ಅದನ್ನು ಪರಿಶೀಲಿಸಿ ಆತನ ಅಥವಾ ಆಕೆಯ ಹೆಸರನ್ನು ಮತಪಟ್ಟಿಯಲ್ಲಿ ಸೇರಿಸುವರು.

ಜನತೆ ತನಗೆ ಬೇಕಾದ ಸರಕಾರವನ್ನು ಆಯ್ಕೆಮಾಡಲು ಅವಕಾಶವಿದೆ. ಅಲ್ಪ ಸಂಖ್ಯಾತರು ಮತದಾನದ ಮೂಲಕ ತಮ್ಮ ಹಿತವನ್ನು ಕಾಯ್ದುಕೊಳ್ಳಬಹುದು.. ಮತದಾನದ ಮೂಲಕ ಸಾಮೂಹಿಕ ಕಲ್ಯಾಣವನ್ನು ಸಾಧಿಸಬಹುದು. ಅಂದರೆ ಸಾರ್ವಜನಿಕರ ಹಿತವನ್ನು ಕಾಯುವ ಪ್ರತಿನಿಧಿಯನ್ನು ಆಯ್ಕೆಮಾಡುವ ಹಕ್ಕು ಪ್ರಜೆಗೆ ಸೇರಿದ್ದು.

ಮತದಾರನಿಗೆ ಚುನಾವಣೆಗೆ ನಿಲ್ಲುವ ಹಕ್ಕಿದೆ. ಆದ್ದರಿಂದ ಈ ಹಕ್ಕನ್ನು ಚಲಾಯಿಸಿ ಮುಂದುವರಿಯಬಹುದು.

ಅನಕ್ಷರಸ್ಥರ ಪೈಕಿ ಅನೇಕರು ದಾಕ್ಷಿಣ್ಯಗಳಿಗೆ ಒಳಗಾಗುವ ಸಂದರ್ಭಗಳುಂಟು. ಸಮಾಜ ಮತ್ತು ದೇಶದ ಹಿತವನ್ನು ಆಲೋಚಿಸಲಾರರು. ಹೀಗಾಗಿ ಅನೇಕ ವೇಳೆ ಅವರು ತಮ್ಮ ಮತವನ್ನು ಮಾರಿಕೊಳ್ಳುವರು. ಈ ವಾತಾವರಣದಲ್ಲಿ ಅರ್ಹರಾದವರು ಅನೇಕ ವೇಳೆ ಆಯ್ಕೆ ಆಗುವ ಸಂಭವ ಕಡಿಮೆ. ಪರಿಣಾಮ, ಒಳ್ಳೆಯ ಆಡಳಿತ ದೊರೆಯುವುದು ಕಷ್ಟ.

ಅನುಭವದಿಂದ ಹೇಳುವುದಾದರೆ ಗ್ರಾಮೀಣರು ಹೆಚ್ಚಿನ ಸಂಖ್ಯೆಯಲ್ಲಿ ಹೋಗಿ ಓಟುಮಾಡುವರು. ನಗರ ಪ್ರದೇಶದಲ್ಲಿ ಅನೇಕ ಮಂದಿ ವಿದ್ಯಾವಂತರು ಓಟು ಮಾಡದೆ ಸುಮ್ಮನೆ ಇದ್ದು ಬಿಡುವರು. ಚುನಾವಣೆಯನ್ನು ಬಹು ಲಘುವಾಗಿ ಕಾಣುವರು.

ಒಟ್ಟಿನಲ್ಲಿ ವಯಸ್ಕರ ಮತದಾನದಲ್ಲಿ ಒಳ್ಳೆಯ ಅಂಶಗಳೇ ಹೆಚ್ಚು. ಮತದಾರನು ಮುಖ್ಯವಾಗಿ ಮೂರು ಅಂಶಗಳನ್ನು ಗಮನದಲ್ಲಿ ಇಡತಕ್ಕದ್ದು.

೧ ಆತ ಮತದಾನ ಮಾಡಬೇಕು.

೨ ಪ್ರಾಮಾಣಿಕವಾಗಿ ಮತದಾನಮಾಡಬೇಕು.

೩ ಜಾಣತನದಿಂದ ಮತನೀಡಬೇಕು.

ಮತದಾನದಲ್ಲಿ ಅನೇಕರಿಗೆ ನಿರಾಸಕ್ತಿ. ಆದ್ದರಿಂದ ರಾಜಕೀಯ ಪಕ್ಷಗಳು ಮತ್ತು ಇತರ ಆಸಕ್ತರು ಜನತೆಯನ್ನು ಚುನಾವಣೆಯ ಕಾಲದಲ್ಲಿ ಜಾಗೃತಗೊಳಿಸುವ ಕಾರ್ಯವನ್ನು ಕೈಗೊಳ್ಳತಕ್ಕದ್ದು.



ಚಿತ್ರ ೩ ನಮ್ಮ ದೇಶ "ರಾಮರಾಜ್ಯ" ಆಗಬೇಕೆಂದು ಬಾಪೂಜಿ ಹೇಳುತ್ತಿದ್ದರು

"ಬಾಪೂಜಿ ನಮ್ಮ ದೇಶ ರಾಮರಾಜ್ಯ ಆಗಬೇಕು ಎಂದು ಪದೇ ಪದೇ ಹೇಳುತ್ತಿದ್ದರು. ಭಾರತ ಹಳ್ಳಿಗಳ ದೇಶ. ಭಾರತದಲ್ಲಿ ಐದು ಲಕ್ಷಕ್ಕೂ ಮೀರಿ ಹಳ್ಳಿಗಳಿವೆ. ಒಟ್ಟು ಎರಡೂವರೆ ಲಕ್ಷ ಗ್ರಾಮ ಪಂಚಾಯಿತಿಗಳು ಇವೆ. ಹಳ್ಳಿಗಳಿಗೆ ಸ್ವಾತಂತ್ರ್ಯದ ಹೊಳೆ ಹರಿಯಬೇಕು. ಗ್ರಾಮರಾಜ್ಯ ರಾಮರಾಜ್ಯ ಆಗಬೇಕು. ರಾಮರಾಜ್ಯ ಎಂದರೆ ಸ್ವರ್ಗ ಎಂದು ತಿಳಿಯಬೇಡಿ. ಅಲ್ಲಿಯೂ ಕೂಡ ಈಗಿನ ಹಾಗೆ ಹುಟ್ಟು ಸಾವು ಇತ್ತು. ಆದರೆ ಈಗಿನಂತೆ ಆಗ ಅನ್ನ, ವಸತಿ, ಬಟ್ಟೆಯ ಕೊರತೆ

ಇರಲಿಲ್ಲ. ಇದಕ್ಕೆ ಕಾರಣ ಜನಗಳ ಸ್ವಭಾವ ಸರಳ. ಅವರಲ್ಲಿ ವಿವೇಕ ಇತ್ತು. ಹೆಚ್ಚಾಗಿ ರೋಗರುಜಿನಗಳಿರಲಿಲ್ಲ. ಅವರಿಗೆ ಹೆಚ್ಚಿನ ಸುಖ ಇತ್ತು. ಒಟ್ಟಿನಲ್ಲಿ ರಾಮರಾಜ್ಯ ಎಂದರೆ ಸುಖೀರಾಜ್ಯ. ರಾಮ ಅಯೋಧ್ಯೆಯ ಪ್ರಭು. ಆತನಿಗೆ ಪಂಚಾಯಿತಿ ಸದಸ್ಯರು ಸಲಹೆಗಾರರು. ಇವರನ್ನು ಗ್ರಾಮದ ಎಲ್ಲ ವಯಸ್ಕರು ಸೇರಿ ಆಯ್ಕೆ ಮಾಡುತ್ತಿದ್ದರು. ಈ ವಿಷಯದಲ್ಲಿ ಬಹುಮಟ್ಟಿಗೆ ಒಂದೇ ಅಭಿಪ್ರಾಯ ಇತ್ತು. ಸರ್ವಸಮ್ಮತಿ ಇತ್ತು. ಈಗಿನಂತೆ ಅನಾರೋಗ್ಯಕರವಾದ ಮತ್ತು ಅಹಿತಕರವಾದ ಪ್ರಚಾರ ಇರಲಿಲ್ಲ. ಹೀಗೆ'ರಾಮರಾಜ್ಯ'ಸುಖದಿಂದ ಇತ್ತು ಎನ್ನುತ್ತಾರೆ. ಗಾಂಧೀಜಿಯವರು ನಮ್ಮ ನಾಡು ಇಂತಹ'ರಾಮರಾಜ್ಯ'ವಾಗಲಿ ಎಂದು ಕನಸು ಕಂಡರು. ಕೇಂದ್ರ ಸರಕಾರ ಇಂದು ಗಾಂಧೀಜಿಯ ಕನಸನ್ನು ನನಸಾಗಿ ಮಾಡಲು ಪ್ರಯತ್ನ ಮಾಡುತ್ತಿದೆ. ಈ ಬಗ್ಗೆ ಕರ್ನಾಟಕದಲ್ಲಿ ಏನಾಗಿದೆ ಎಂಬುದನ್ನು ತಿಳಿಸುವೆ.

ಮೊದಲು ಮೈಸೂರು ಸಂಸ್ಥಾನ ಇದ್ದುದು ಎಲ್ಲರಿಗೂ ಗೊತ್ತಿದೆ. ಸಾವಿರದ ಒಂಬೈನೂರಾ ಐವತ್ತಾರರಲ್ಲಿ ಭಾಷಾವಾರು ತತ್ವದ ಮೇಲೆ ಕರ್ನಾಟಕ ರಾಜ್ಯ ಆಯಿತು. ಕನ್ನಡ ಪ್ರದೇಶಗಳು ಮುಂಬಯಿ, ಮದರಾಸು ಮತ್ತು ಹೈದರಾಬಾದು ರಾಜ್ಯಗಳಲ್ಲಿ ಹಂಚಿಹೋಗಿದ್ದವು. ಆ ಭಾಗಗಳು ಮೈಸೂರಿಗೆ ಸೇರಿದವು. ಕರ್ನಾಟಕ ರಾಜ್ಯ ಉದಯಿಸಿತು. ಹೀಗಿರುವಲ್ಲಿ ಪಂಚಾಯಿತಿ ರಾಜ್ಯ ವ್ಯವಸ್ಥೆ ಒಂದೇ ರೀತಿ ಇರಲಿಲ್ಲ. ರಾಜ್ಯದ ಒಂದೊಂದು ಪ್ರದೇಶದಲ್ಲಿ ಒಂದೊಂದು ತೆರನಾದ ಪಂಚಾಯಿತಿ ವ್ಯವಸ್ಥೆ ಇತ್ತು. ಸಾವಿರದ ಒಂಬೈನೂರಾ ಐವತ್ತೊಂಬತ್ತರಲ್ಲಿ ಇಡೀ ಕರ್ನಾಟಕದಲ್ಲಿ ಒಂದೇ ರೀತಿಯ ಗ್ರಾಮ ಪಂಚಾಯಿತಿ ವ್ಯವಸ್ಥೆ ಜಾರಿಗೆ ಬಂದಿತು.

ಸಾವಿರದ ಒಂಬೈನೂರಾ ಅರವತ್ತೂರರಲ್ಲಿ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆ ಆಯಿತು. ಉದ್ದೇಶ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದು. ಈ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಸಾವಿರದ

ಒಂಬೈನೂರಾ ಅರವತ್ತೈದರಲ್ಲಿ ಒಂದು ಮಸೂದೆ ರಚನೆ ಆಯಿತು. ಅದರ ಪ್ರಕಾರ ಅಧಿಕಾರ ಮೂರು ಹಂತದಲ್ಲಿ ಹಂಚಿಕೆ ಆಗಬೇಕಾಗಿತ್ತು. ಆದರೆ ಅದು ಕಾರ್ಯಗತ ಆಗಲಿಲ್ಲ.

ಸಾವಿರದ ಒಂಬೈನೂರಾ ಎಪ್ಪತ್ತೇಳರಲ್ಲಿ ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಅಧಿಕಾರ ವಿಕೇಂದ್ರೀಕರಣ ಅದರ ನೀತಿ ಎಂದು ಚುನಾವಣೆಗೆ ಮುಂಚೆ ಘೋಷಣೆ ಮಾಡಿತ್ತು. ಸಾವಿರದ ಒಂಬೈನೂರಾ ಎಪ್ಪತ್ತೇಳರ ಡಿಸೆಂಬರನಲ್ಲಿ ಪಂಚಾಯಿತಿರಾಜ್ ಸಂಸ್ಥೆಗಳನ್ನು ಸುಧಾರಿಸಲು ಒಂದು ಸಮಿತಿ ರಚನೆ ಆಯಿತು. ಅಶೋಕ ಮೆಹತಾ ಅದರ ಅಧ್ಯಕ್ಷರು. ಆ ಸಮಿತಿ ತೀವ್ರವಾಗಿ ಆಲೋಚಿಸಿ ಕೆಲವು ಶಿಫಾರಸುಗಳನ್ನು ಮಾಡಿತು. ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳನ್ನು ರಚಿಸಿದರೆ ಸಾಲದು. ಅವುಗಳಿಗೆ ಸಾಕಷ್ಟು ಹಣದ ನೆರವು ಬೇಕು. ಹೀಗೆ ಅಶೋಕ ಮೆಹತಾ ಸಮಿತಿ ಶಿಫಾರಸು ಮಾಡಿತು.

ಸಾವಿರದ ಒಂಬೈನೂರಾ ಎಂಬತ್ಮೂರರಲ್ಲಿ ಕರ್ನಾಟಕದಲ್ಲಿ ರಾಮಕೃಷ್ಣ ಹೆಗ್ಗಡೆಯವರ ನೇತೃತ್ವದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಅವರ ಮಂತ್ರಿ ಮಂಡಳದಲ್ಲಿ ಅಬ್ದುಲ್ ನಜೀರ್ ಸಾಹೇಬರು ಗ್ರಾಮಾಭಿವೃದ್ಧಿ ಸಚಿವರಾಗಿದ್ದರು. ಗ್ರಾಮೀಣ ಅಭಿವೃದ್ಧಿಯಲ್ಲಿ ಅವರಿಗೆ ತುಂಬ ಕಳಕಳಿ ಇತ್ತು. ಅವರು ತಮ್ಮ ಆಳವಾದ ಅನುಭವದ ಹಿನ್ನೆಲೆಯಲ್ಲಿ ಹೊಸಮಂಡಳ ಪಂಚಾಯಿತಿ ಮಸೂದೆಯನ್ನು ರಚಿಸಿದರು. ಈ ಮಸೂದೆ ಅಶೋಕ ಮೆಹತಾ ಅವರ ಶಿಫಾರಸನ್ನು ಆಧರಿಸಿತ್ತು. ಸಾವಿರದ ಒಂಬೈನೂರಾ ಎಂಬತ್ನಾಲ್ಕು ಮಾರ್ಚಿಯಲ್ಲಿ ಮಸೂದೆ ವಿಧಾನಮಂಡಳದಲ್ಲಿ ಪಾಸಾಯಿತು. ಸಾವಿರದ ಒಂಬೈನೂರಾ ಎಂಬತ್ತೈದರ ಜುಲೈನಲ್ಲಿ ಮಸೂದೆ ರಾಷ್ಟ್ರಪತಿಗಳ ಅಂಗೀಕಾರ ಪಡೆಯಿತು. ಈ ಮಸೂದೆ ಸಾವಿರದ ಒಂಬೈನೂರಾ ಎಂಬತ್ತೈದು ಆಗಷ್ಟ ಹದಿನೈದರಂದು ಜಾರಿಗೆ ಬಂದಿತು. ಈ ಕಾಯಿದೆಯ ಪ್ರಕಾರ



ಗ್ರಾಮ ಪಂಚಾಯಿತಿ

ರಚಿತವಾದ ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಒಳ್ಳೆಯ ಕೆಲಸ ಮಾಡಿದವು.

ಎಲ್ಲ ರಾಜ್ಯಗಳಲ್ಲೂ ಪಂಚಾಯಿತಿ ವ್ಯವಸ್ಥೆ ಇರತಕ್ಕದ್ದು. ಸಂವಿಧಾನದಲ್ಲಿ ಗ್ರಾಮ ಪಂಚಾಯಿತಿಯ ಉಲ್ಲೇಖ ಇದ್ದು ನಿರ್ದೇಶಕ ಅಂಶಗಳಲ್ಲಿ ಸೇರಿದೆ. ಸಂವಿಧಾನ ಎಂದರೇನು? ಅದನ್ನು ಸೂಕ್ಷ್ಮವಾಗಿ ವಿವರಿಸುವೆ. ನಮ್ಮ ಸರಕಾರದ ರಚನೆ ಹೇಗೆ? ಅದನ್ನು ಆಯ್ಕೆ ಮಾಡುವವರು ಯಾರು? ಆಡಳಿತ ನಡೆಸುವ ಬಗೆ ಹೇಗೆ? ಪ್ರಜೆಗಳ ಹಕ್ಕು ಬಾಧ್ಯತೆ ಏನು? ಈ ವಿಷಯಗಳನ್ನು ವಿವರಿಸುವುದೇ ಸಂವಿಧಾನ.

ಸಂವಿಧಾನದಲ್ಲಿ ಗ್ರಾಮಪಂಚಾಯಿತಿಗಳ ಬಗ್ಗೆ ಉಲ್ಲೇಖ ಇತ್ತು ಎಂದು ಹೇಳಿದೆ. ಆದರೆ ಅದಕ್ಕೆ ಸಂವಿಧಾನದ ಮಾನ್ಯತೆ ಮತ್ತು ಸ್ಥಾನಮಾನ ಅನಿವಾರ್ಯ ಆಗಿತ್ತು. ಈ ಹಿನ್ನೆಲೆಯಲ್ಲಿ ದಿವಂಗತ ರಾಜೀವ್‌ಗಾಂಧಿ ಗ್ರಾಮ ಪಂಚಾಯಿತಿ

ವ್ಯವಸ್ಥೆಗೆ ಸಂವಿಧಾನದ ಮಾನ್ಯತೆ ದೊರಕಿಸಲು ಪ್ರಯತ್ನ ಪಟ್ಟರು. ಆದರೆ ಅಷ್ಟರಲ್ಲೇ ಅವರು ತೀರಿಕೊಂಡರು.

ಪಿ.ವಿ.ನರಸಿಂಹರಾಯರು ಅನಂತರ ಪ್ರಧಾನಮಂತ್ರಿ ಆದರು. ಅವರು ಗ್ರಾಮಪಂಚಾಯಿತಿಗೆ ಸಂಬಂಧ ಪಟ್ಟ ಮಸೂದೆಯನ್ನು ಲೋಕಸಭೆಯ ಜಂಟಿಸಮಿತಿಗೆ ವಹಿಸಿದರು. ಜಂಟಿ ಸಮಿತಿ ಕೆಲವು ಶಿಫಾರಸುಗಳನ್ನು ಮಾಡಿತು. ವಿವಿಧ ರಾಜಕೀಯ ಪಕ್ಷಗಳು ಮಸೂದೆಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ನೀಡಿದವು. ಈ ಎಲ್ಲ ಅಭಿಪ್ರಾಯಗಳನ್ನು ಅಳವಡಿಸಿದ ಮಸೂದೆ ಸಂವಿಧಾನದಲ್ಲಿ ತಿದ್ದುಪಡಿಯಾಗಿ ಸೇರಿ ಸಂಸತ್ತಿನ ಅಂಗೀಕಾರ ಪಡೆಯಿತು. ರಾಜ್ಯ ಸಭೆ ಮತ್ತು ಲೋಕಸಭೆ ಸೇರಿ ಸಂಸತ್ತು ಎಂದಾಗಿದೆ. ಸಂವಿಧಾನದ ತಿದ್ದುಪಡಿಯಿಂದ ಕೇಂದ್ರ ಸರಕಾರಕ್ಕೆ ಬಲ ಬಂತು. ಕೇಂದ್ರ ಸರಕಾರ ಎಲ್ಲ ರಾಜ್ಯಗಳಲ್ಲೂ ಗ್ರಾಮಪಂಚಾಯಿತಿ ಮಸೂದೆಯನ್ನು ಜಾರಿಗೆ ತರುವಂತೆ ತಿಳಿಸಿದೆ. ಅದರ ವ್ಯವಸ್ಥೆ ನಿಗದಿಯಾದ ಅವಧಿಯಲ್ಲಿ ಆಗತಕ್ಕದ್ದು. ಕರ್ನಾಟಕ ರಾಜ್ಯ ಸರಕಾರ, ಕೇಂದ್ರ ಸರಕಾರದ ಸೂಚನೆಯ ಮೇರೆ ಸಾವಿರದ ಒಂಬೈನೂರಾ ತೊಂಬತ್ಮೂರರ ಮೇ ತಿಂಗಳಲ್ಲಿ ಗ್ರಾಮ ಪಂಚಾಯಿತಿ ರಾಜ್ಯ ಮಸೂದೆಯನ್ನು ಜಾರಿಗೆ ತಂದಿತು. ಈ ಮಸೂದೆಯ ಮುಖ್ಯಾಂಶಗಳು ಹೀಗಿವೆ :

೧ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ನಿಲ್ಲುವಂತಿಲ್ಲ. ಆದರೂ ಪರೋಕ್ಷವಾಗಿ ಅವುಗಳ ಪಾತ್ರ ಇಲ್ಲದೇ ಇಲ್ಲ. ಇಲ್ಲವೆಂದು ಹೇಳಲುಬಾರದು. ಉಮೇದುವಾರರ ಮೇಲೆ ಪಕ್ಷಗಳ ಆಶೀರ್ವಾದ ಇಲ್ಲದೇ ಇಲ್ಲ. ರಾಜಕೀಯ ಪಕ್ಷಗಳು ಪರೋಕ್ಷವಾಗಿ ಭವಿಷ್ಯದ ದೃಷ್ಟಿಯಿಂದ ಗ್ರಾಮಮಟ್ಟದಲ್ಲಿ ತಮ್ಮ ಪಕ್ಷವನ್ನು ಸೃಷ್ಟಿಸಿ ಬೆಳೆಸಬೇಕಲ್ಲವೆ?

೨ ಮೂರು ಹಂತಗಳಲ್ಲಿ ಪಂಚಾಯಿತಿಗಳು ರಚನೆ ಆಗಲಿವೆ. ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ. ಮೊದಲು ಮಂಡಳ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತು ಎಂಬ ಎರಡೇ ಹಂತಗಳಿದ್ದವು.

೩ ಹೆಂಗಸರಿಗೆ, ಹಿಂದುಳಿದವರಿಗೆ, ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿ ಉಂಟು.

೪ ಚುನಾವಣೆ ನಡೆಸಲು ಪ್ರತೀ ರಾಜ್ಯದಲ್ಲಿ ಪ್ರತ್ಯೇಕ ಚುನಾವಣಾ ಆಯೋಗ ರಚನೆ ಆಗಲಿದೆ.

ಚುನಾವಣಾ ಕಮಿಷನರ್ ಅವರನ್ನು ಆಯಾರಾಜ್ಯದ ರಾಜ್ಯಪಾಲರು ನೇಮಕ ಮಾಡುವರು. ಕಾರಣ ಇಷ್ಟೇ. ಇಡೀ ರಾಷ್ಟ್ರದಲ್ಲಿ ಗ್ರಾಮ ಪಂಚಾಯಿತಿ ವ್ಯವಸ್ಥೆ ಬರತಕ್ಕದ್ದು. ಇದು ಕೇಂದ್ರ ಸರಕಾರದ ನಿರ್ಧಾರ. ಅದನ್ನು ಸಂಸತ್ತು ಅಂಗೀಕರಿಸಿದೆ. ಈ ವಿಷಯ ಆಗಲೇ ತಿಳಿಸಿದ್ದೇನೆ. ಪ್ರತಿರಾಜ್ಯದಲ್ಲೂ ಕಾಲಕಾಲಕ್ಕೆ ಗ್ರಾಮ, ತಾಲ್ಲೂಕು ಜಿಲ್ಲಾಮಟ್ಟದಲ್ಲಿ ಚುನಾವಣೆ ನಡೆಸುವ ಕಾರ್ಯ ಹೆಚ್ಚಿನದು. ಈ ವಿಶೇಷ ಹೊಣೆಯನ್ನು ನಿರ್ವಹಿಸಲು ಪ್ರತ್ಯೇಕ ಚುನಾವಣಾ ಆಯೋಗ ಅನಿವಾರ್ಯ.

ಗ್ರಾಮ ಪಂಚಾಯಿತಿ ಚುನಾವಣೆ

ಐದರಿಂದ ಏಳು ಸಾವಿರ ಜನಸಂಖ್ಯೆಗೆ ಒಂದು ಗ್ರಾಮ ಪಂಚಾಯಿತಿ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಿಗೆ ಈ ಜನ ಸಂಖ್ಯೆಯ ಮಿತಿಯಿಂದ ವಿನಾಯಿತಿ ಉಂಟು. ಈ ಜಿಲ್ಲೆಗಳಲ್ಲಿ ಎರಡು ಸಾವಿರದ ಐನೂರು ಪ್ರಜಾಸಂಖ್ಯೆಗೆ ಒಂದು ಗ್ರಾಮ ಪಂಚಾಯಿತಿ. ಹಿಂದೆ ಕರ್ನಾಟಕದಲ್ಲಿ ಎರಡು ಸಾವಿರದ ಐನೂರಾ ತೊಂಬತ್ತು ಮಂಡಳ ಪಂಚಾಯಿತಿಗಳು ಇದ್ದವು. ಈಗಿನ ಕಾಯಿದೆ ಪ್ರಕಾರ ಐದು ಸಾವಿರದ ಆರುನೂರಾ ನಲವತ್ತೆರಡು ಗ್ರಾಮ ಪಂಚಾಯಿತಿಗಳಿವೆ.

ಪ್ರತಿ ನಾಲ್ಕುನೂರು ಮಂದಿಗೆ ಒಬ್ಬ ಪ್ರತಿನಿಧಿ.

ಹಿಂದುಳಿದವರಿಗೆ, ಮಹಿಳೆಯರಿಗೆ ಶೇಕಡ ಮೂವತ್ತರಷ್ಟು ಮೀಸಲಾತಿ ಉಂಟು. ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಶೇಕಡ ಹದಿನೆಂಟು ಮೀಸಲು.

ಗ್ರಾಮ ಪಂಚಾಯಿತಿ ಚುನಾವಣೆಗೆ ಯಾರು ನಿಲ್ಲಬಹುದು ?

೧ ಚುನಾವಣೆಗೆ ನಿಲ್ಲುವವರ ಹೆಸರು ಆಯಾ ಪಂಚಾಯಿತಿಯ ಮತದಾರರ ಪಟ್ಟಿಯಲ್ಲಿ ಇರತಕ್ಕದ್ದು.

೨ ಹದಿನೆಂಟು ವಯಸ್ಸು ಆಗಿರಬೇಕು.

೩ ಆತ ಯಾವುದೇ ಅನರ್ಹತೆಗೆ ಒಳಗಾಗಿರಬಾರದು.

ಚುನಾವಣೆಗೆ ನಿಲ್ಲಲು ಯಾರು ಅರ್ಹರಲ್ಲ ?

೧ ಇಪ್ಪತ್ತೊಂದು ವಯಸ್ಸು ಆಗಿಲ್ಲದಿದ್ದವರು.

೨ ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯಾಲಯದಿಂದ ಮೂರುತಿಂಗಳು ಜೈಲು ಶಿಕ್ಷೆಗೆ ಒಳಗಾದವರು,

೩ ಸರಕಾರ ಅಥವಾ ಯಾವುದೇ ಸ್ಥಳೀಯ ಸಂಸ್ಥೆಯ ನೌಕರಿಯಿಂದ ವಜಾ ಆದವರು,



ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯಾಲಯದಿಂದ ಮೂರು ತಿಂಗಳು ಮೇಲ್ಪಟ್ಟು ಜೈಲು ಶಿಕ್ಷೆಗೆ ಒಳಗಾದವರು ಚುನಾವಣೆಗೆ ಸ್ಪರ್ಧಿಸಲು ಅರ್ಹರಲ್ಲ.

೪ ಸ್ಥಳಿಯ ಸಂಸ್ಥೆಯ ಸದಸ್ಯತ್ವದಿಂದ ವಜಾ ಆದವರು,

೫ ವಕೀಲರು, ವೈದ್ಯರು, ಚಾರ್ಟರ್ಡ್ ಅಕೌಂಟೆಂಟರು, ಮುಂತಾದವರನ್ನು ವೃತ್ತಿಗೆ ಅನರ್ಹರು ಎಂದು ಸಂಬಂಧ ಪಟ್ಟ ಅಧಿಕಾರಿಗಳು ಅವರನ್ನು ಅಮಾನತ್ತಿನಲ್ಲಿ ಇಟ್ಟಿದ್ದರೆ,

೬ ವೃತ್ತಿಯಿಂದ ವಜಾ ಆಗಿದ್ದರೆ,

೭ ದಿವಾಳಿ ಆಗಿದ್ದರೆ,

೮ ಬುದ್ಧಿ ಭ್ರಮೆ ಆಗಿದೆ ಎಂದು ನ್ಯಾಯಾಲಯ ತೀರ್ಮಾನಿಸಿದ್ದರೆ,

೯ ರಾಜ್ಯದ ಅಥವಾ ಕೇಂದ್ರ ಸರಕಾರ ಇರಬಹುದು, ಅವುಗಳ ಅಂಕೆಗೆ ಒಳಪಟ್ಟ ಸ್ಥಳೀಯ ಅಥವಾ ಪ್ರಾಧಿಕಾರ ಹುದ್ದೆಯಲ್ಲಿ ಅನರ್ಹ ಎಂದು ಘೋಷಿಸಲ್ಪಟ್ಟಿದ್ದರೆ,

೧೦ ಆಯಾ ಗ್ರಾಮಪಂಚಾಯಿತಿಯ ಕ್ಷೇತ್ರದಲ್ಲಿ ನಡೆಯುವ ಅಧಿಕೃತ ಕಾಮಗಾರಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪಾಲುಗಾರಿಕೆ ಹೊಂದಿದ್ದರೆ,

೧೧ ಗ್ರಾಮ ಪಂಚಾಯಿತಿ ಪರವಾಗಿ ವೇತನ ಪಡೆಯುವ ವಕೀಲರು,

೧೨ ಗ್ರಾಮ ಪಂಚಾಯಿತಿಗೆ ಕೊಡಬೇಕಾದ ಹಣ ಬಾಕಿ ಇದ್ದರೆ,

೧೩ ಗ್ರಾಮ ಪಂಚಾಯಿತಿ ವಿರುದ್ಧ ವಕಾಲತ್ತು ವಹಿಸಿದ ವಕೀಲರು,

೧೪ ಇತರ ಯಾವುದೇ ಕಾನೂನಿನ ರೀತ್ಯಾ ಚುನಾವಣೆಗೆ ಅನರ್ಹನೆಂದು ತೀರ್ಮಾನ ಆಗಿದ್ದರೆ.

_ ಇಂತಹವರು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಲ್ಲ.

ಚುನಾವಣೆಯಲ್ಲಿ ಮುಖ್ಯವಾಗಿ ಎರಡು ಹಂತಗಳು ೧ ಉಮೇದುವಾರನ



ಮತದಾನ

ನಾಮ ನಿರ್ದೇಶನ ಅಥವಾ ನಾಮಕರಣ ೨ ವಾಸ್ತವ ಮತದಾನ. ಉಮೇದುವಾರನಿಗೆ ಮತನೀಡಬಹುದು ಇಲ್ಲವೆ ನೀಡದೆ ಇರಬಹುದು. ನಿಂತ ಉಮೇದುವಾರರು ಅಯೋಗ್ಯರೆಂದು ಕಾಣಬಹುದು. ಆಗ ಹೊಸ ಉಮೇದುವಾರರನ್ನು ತರುವಂತಿಲ್ಲ. ಆದ್ದರಿಂದ ಚುನಾವಣೆಗೆ ಯೋಗ್ಯರನ್ನು, ಸದ್ಗುಣಿಗಳನ್ನು ಆಯ್ಕೆ ಮಾಡತಕ್ಕದ್ದು. ಪ್ರಜಾಪ್ರಭುತ್ವ ಇರುವ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಉಮೇದುವಾರರನ್ನು ಆರಿಸುವಲ್ಲಿ ಬಲು ಎಚ್ಚರಿಕೆ ವಹಿಸುವರು.

ಚುನಾವಣೆಯಲ್ಲಿ ಕೆಲವರು ಸೋಲುವರು. ಅವರಿಗೆ ಚುನಾವಣೆಯಲ್ಲಿ ಕೆಲವು ಅಕ್ರಮಗಳು ನಡೆದಿವೆ ಎಂದು ತೋರಬಹುದು. ಆಗ ಆತನು ಚುನಾವಣೆ ನಡೆದ ಮೂವತ್ತು ದಿನಗಳಲ್ಲಿ ನ್ಯಾಯಾಲಯದಲ್ಲಿ ತಕರಾರು ಹೂಡಬಹುದು. ಅಂತಹ ನ್ಯಾಯಾಲಯ ಯಾವುದು ಎಂಬುದನ್ನು ಚುನಾವಣೆಯ ಕಾನೂನಿನಲ್ಲಿ ಸೂಚಿಸಿರುವರು.

ನ್ಯಾಯಾಲಯ ಸೂಕ್ತ ವಿಚಾರಣೆ ಮಾಡಿ ತೀರ್ಪು ನೀಡುವುದು. ತಕರಾರು ಹೂಡಿದ ವ್ಯಕ್ತಿ ತನ್ನ ಪರವಾಗಿ ವಕೀಲರನ್ನು ನೇಮಿಸಬಹುದು.

ಚುನಾವಣೆಯ ಅವಧಿಯಲ್ಲಿ ಕೆಳಗೆ ಕಂಡಂತೆ ನಡೆದಲ್ಲಿ ಅಪರಾಧ ಸಾಬೀತಾದಲ್ಲಿ ಶಿಕ್ಷೆ ಕಟ್ಟಿಟ್ಟದ್ದು.

೧ ಜಾತಿ, ಮತ, ಧರ್ಮದ ಹೆಸರಿನಲ್ಲಿ ಮತ ಕೇಳುವುದು.

೨ ಧಾರ್ಮಿಕ ಸಂಕೇತಗಳ ಬಳಕೆ.

೩ ರಾಷ್ಟ್ರ ಧ್ವಜ, ರಾಷ್ಟ್ರ ಮುದ್ರೆಗಳ ಬಳಕೆ.

೪ ಪ್ರಚಾರ ಸಭೆ ನಡೆಸಿ ಮಾದಕ ಪಾನೀಯ ಹಂಚುವುದು.

೫ ಎದುರು ಉಮೇದುವಾರನ ಚಾರಿತ್ರವಧೆ, ಉಮೇದುವಾರನ ಬಗ್ಗೆ ಸುಳ್ಳು ಆರೋಪ, ಬೈಗಳ ಅಂದರೆ ಕೊಲೆಗಾರ, ಕಳ್ಳ, ವ್ಯಭಿಚಾರಿ, ವಂಚಕ, ದೇಶದ್ರೋಹಿ ಎಂದು ಹೇಳುವುದು. ಹೀಗೆ ಮಾಡುವುದರಿಂದ ಉಮೇದುವಾರನ ನಡತೆಯ ಬಗ್ಗೆ ಮತದಾರರ ಮನಸ್ಸಿನಲ್ಲಿ ಸಂಶಯ ಮೂಡುವುದು. ಈ ತೆರನಾದ ಮನುಷ್ಯನಿಗೆ ಓಟು ಕೊಡುವುದು ಹೇಗೆ ಎಂಬ ಗೊಂದಲ ಮತದಾರರ ಮನಸ್ಸಿನಲ್ಲಿ ಉಂಟಾಗುವುದು.

೬ ಚುನಾವಣೆಯ ಸಂದರ್ಭದಲ್ಲಿ ಪ್ರಚಾರಪತ್ರಿಕೆ, ಭಿತ್ತಿಪತ್ರ ಮುಂತಾದವುಗಳನ್ನು ಪ್ರಕಟಿಸುವುದು ರೂಢಿಯಲ್ಲಿದೆ. ಅವುಗಳಲ್ಲಿ ಮುದ್ರಕರು ಮತ್ತು ಪ್ರಕಾಶಕರ ಹೆಸರನ್ನು ಪ್ರಕಟಿಸದೆ ಇರುವುದು.

೭ ಚುನಾವಣೆಯ ಹಿಂದಿನ ದಿನ ಸಾರ್ವಜನಿಕ ಸಭೆ ಸೇರಿಸುವುದು.

ಚುನಾವಣೆಯ ದಿನ ಚುನಾವಣಾ ಕೇಂದ್ರದಲ್ಲಿ ಅನುಸರಿಸಬೇಕಾದ ವಿಧಾನಗಳು

ಮತದಾನ ಕೇಂದ್ರದಲ್ಲಿ ಅಥವಾ ಮತದಾನ ಕೇಂದ್ರದಿಂದ ಒಂದು ನೂರು ಮೀಟರ್ ಒಳಗೆ ಕೆಳಗೆ ಕಂಡ ಕಾರ್ಯಕ್ರಮಗಳು ನಿಷಿದ್ಧ.

೧ ಮತಗಳಿಕೆಗೆ ಪ್ರಚಾರ.

೨ ಮತ ಕೇಳುವುದು.

೩ ಉಮೇದುವಾರನಿಗೆ ಮತ ನೀಡಬಾರದು ಎಂದು ಪ್ರಚಾರ ಮಾಡುವುದು.

೪ ಬಾಯಿ ಅಥವಾ ಧ್ವನಿವರ್ಧಕಗಳ ಬಳಕೆ.

೫ ಮತದಾರನಿಗೆ ಹಿಂಸೆ ಮತ್ತು ಕಿರುಕುಳ ನೀಡುವುದು.

೬ ಮತ ನೀಡದೆ ಮತ ಕಟ್ಟೆಯಿಂದ ಮತಪತ್ರವನ್ನು ಹೊರಗೆ ಒಯ್ಯುವುದು.

೭ ಮತಗಟ್ಟೆ ವಶಪಡಿಸಿಕೊಳ್ಳುವುದು.

೮ ಮತದಾನದ ದಿನ ಸಭೆ ಕೂಡಿಸುವುದು.

೯ ಮತದಾನ ಕೇಂದ್ರಕ್ಕೆ ಮತದಾರನನ್ನು ವಾಹನದಲ್ಲಿ ಒಯ್ಯುವುದು.

ಇಂದು ಗ್ರಾಮದಿಂದ ಹಿಡಿದು ರಾಷ್ಟ್ರಮಟ್ಟದವರೆಗೆ ಪ್ರಜೆಯೇ ಪ್ರಭು. ಗ್ರಾಮಮಟ್ಟದಲ್ಲಿ ಗ್ರಾಮಪಂಚಾಯಿತಿ ಚುನಾವಣೆ ಉಂಟು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ವಿಧಾನ ಸಭೆ ಮತ್ತು ಲೋಕಸಭೆಗೆ ಚುನಾವಣೆ ಇದೆ. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಚುನಾವಣೆ ಇದೆ. ಅದನ್ನು ಆಮೇಲೆ ವಿವರಿಸುತ್ತೇನೆ.

ಗ್ರಾಮೀಣರಿಗೆ ಎಲ್ಲಕ್ಕಿಂತ ಗ್ರಾಮ ಪಂಚಾಯಿತಿ ಚುನಾವಣೆಗೆ ಆದ್ಯತೆ ಉಂಟು. ಪಂಚಾಯಿತಿ ರಾಜ್ಯ ರಾಮರಾಜ್ಯಕ್ಕೆ ಬುನಾದಿ ಎಂಬುದು ಬಾಪೂಜಿ ನಂಬಿಕೆ. ಪಂಚಾಯಿತಿ ರಾಜ್ಯ ಎಂದರೇನು? ಐದು ಮಂದಿ ಹಿರಿಯರು ಮತ್ತು ಅನುಭವಿಗಳು ಸೇರಿ ಅಧಿಕಾರ ನಡೆಸುವುದು. ಸ್ವಾತಂತ್ರ್ಯಾನಂತರ ಪಂಚಾಯಿತಿ ರಾಜ್ಯ ವ್ಯವಸ್ಥೆಗೆ ಹೊಸ ಚೈತನ್ಯ ತುಂಬುವ ಪ್ರಯತ್ನ ನಡೆದಿದೆ.

ಪಂಚಾಯಿತಿರಾಜ್ಯ ನಮಗೆ ಹೊಸದಲ್ಲ. ಈ ವಿಷಯವನ್ನು ಆಗಲೇ ವಿವರಿಸಿದ್ದೇನೆ. ಆದರೆ ದೇಶದ ದೃಷ್ಟಿಯಿಂದ ಈ ಅಂಶವನ್ನು ಒತ್ತಾಯ ಪೂರ್ವಕವಾಗಿ ಹೇಳಲೇಬೇಕು. ಒಂದು ಕಾಲಕ್ಕೆ ಗ್ರಾಮ ಪಂಚಾಯಿತಿಗಳು ಚೆನ್ನಾಗಿ ಕೆಲಸಮಾಡಿ ಜನಪ್ರಿಯ ಆಗಿದೆ. ಅಂತಹ ಪರಿಸ್ಥಿತಿಯನ್ನು ಈಗ ಶ್ರದ್ಧೆ, ನಿಷ್ಠೆಯಿಂದ ದುಡಿದು ಉಂಟುಮಾಡಬೇಕಾಗಿದೆ. ತಿಳಿವಳಿಕೆ ಉಳ್ಳ ಗ್ರಾಮೀಣರಿಂದ ಗ್ರಾಮಪಂಚಾಯಿತಿಗಳು ಯಶಸ್ವಿಯಾಗಿ ನಡೆಯುವುವು. ವಿದ್ಯಾವಂತರು ಈ ಬಗ್ಗೆ ಗ್ರಾಮೀಣರಿಗೆ ಮಾರ್ಗದರ್ಶನ ನೀಡಬೇಕು. ಅಧಿಕಾರ ವರ್ಗ ಸೂಕ್ತ ತಿಳಿವಳಿಕೆ ನೀಡಿ ಗ್ರಾಮಸ್ಥರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಬೇಕು.

ಇದನ್ನೆಲ್ಲಾ ಕೇಳಿ " ಸ್ವಾಮಿ, ಕರೆದಾಗ ಕೇಳಿದವರಿಗೆ ಓಟು ಹಾಕುವುದು ಮಾತ್ರ ಗೊತ್ತಿತ್ತು. ನೀವು ಹೇಳಿದ್ದೆಲ್ಲಾ ನಮಗೆ ಹೊಸದು. ತಿಳಿಯಬೇಕಾದ ವಿಚಾರ. ನೀವು ಹೇಳಿದಂತೆ ತಾಲ್ಲೂಕು ಪಂಚಾಯಿತಿಯಿಂದ ಲೋಕಸಭೆವರೆಗೆ ತಿಳಿಯೋದು ಇದೆ. ಇದನ್ನೇ ಮುಂದುವರಿಸಿ. ನಾಳೆ ಸೋಮವಾರ ಪಕ್ಕದ ಊರಿನವರನ್ನು ಕರೆತರುತ್ತೇನೆ " ಎಂಬುದಾಗಿ ಸಭೆಯಿಂದ ಎದ್ದು ಕೆಲವರು ಹೇಳಿದರು.

ಎರಡನೆಯ ಸೋಮವಾರ ಸಭೆ ಎಂದಿನಂತೆ ರಾತ್ರಿ ಎಂಟು ಗಂಟೆಗೆ ಸೇರಿತು. ಜನತೆ ಹೆಚ್ಚು ಸಂಖ್ಯೆಯಲ್ಲಿ ಸೇರಿತ್ತು. ಅಕ್ಕಪಕ್ಕದ ಊರಿನಿಂದ ಕೆಲವರು ಬಂದಿದ್ದರು. ರಂಗಣ್ಣನಿಗೆ ಜನರ ಗುಂಪು ನೋಡಿ ಸಂತೋಷ ಉಕ್ಕಿತು. ರಂಗಣ್ಣ ತನ್ನ ಮಾತನ್ನು ಮುಂದುವರಿಸಿದನು.

ಹಿಂದಿನ ವಾರ ಗ್ರಾಮಪಂಚಾಯಿತಿಯ ಇತಿಹಾಸ, ಪ್ರಾಚೀನಕಾಲದಲ್ಲಿ ಹಾಗೂ ಇಂದು ಚುನಾವಣೆಯ ರೀತಿ, ಚುನಾವಣೆ ಎಂದರೇನು ? ಚುನಾವಣೆಗೆ ನಿಲ್ಲಲು ಅರ್ಹತೆ ಏನಿರಬೇಕು? ಚುನಾವಣೆಯ ಕಾಲದಲ್ಲಿ ಉಮೇದುವಾರ ಅಥವಾ ಅವನ ಏಜೆಂಟ್ ಹೇಗೆ ನಡೆದುಕೊಳ್ಳಬೇಕು ಮುಂತಾದ ವಿಚಾರಗಳನ್ನು ತಿಳಿಸಿದ್ದೇನೆ. ಇಂದು ತಾಲ್ಲೂಕು ಪಂಚಾಯಿತಿ ಮತ್ತು ಅಲ್ಲಿಂದ ಮುಂದಕ್ಕೆ ತಿಳಿಸುವೆ.

ಇಂದಿನ ಗ್ರಾಮ ಪಂಚಾಯಿತಿ ಕಾನೂನಿನ ಪ್ರಕಾರ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ತಾಲ್ಲೂಕು ಪಂಚಾಯಿತಿ ಉಂಟು. ತಾಲ್ಲೂಕು ಪಂಚಾಯಿತಿಯಲ್ಲಿ ಕೆಳಕಂಡಂತೆ ಸದಸ್ಯರು ಇರುವರು.

೧ ಚುನಾಯಿತ ಸದಸ್ಯರು. ಹತ್ತು ಸಾವಿರ ಪ್ರಜಾ ಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿ ಒಂದು ಲಕ್ಷಕ್ಕೆ ಹೆಚ್ಚಿಲ್ಲದ ತಾಲ್ಲೂಕಿಗೆ ಹನ್ನೊಂದು ಮಂದಿ ಚುನಾಯಿತ ಸದಸ್ಯರು.

೨ ಆಯಾ ತಾಲ್ಲೂಕಿನ ವಿಧಾನಸಭಾ ಸದಸ್ಯರು ಮತ್ತು ಆಯಾ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ನೊಂದಾಯಿಸಲ್ಪಟ್ಟ ವಿಧಾನ ಪರಿಷತ್ತಿನ ಸದಸ್ಯರು.

೩ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ನೋಂದಾಯಿಸಲ್ಪಟ್ಟ ರಾಜ್ಯ ಸಭಾಸದಸ್ಯರು.

೪ ಸರದಿ ಪ್ರಕಾರ ಐದನೇ ಒಂದು ಭಾಗ ಗ್ರಾಮ ಪಂಚಾಯಿತಿ ಅಧ್ಯಕ್ಷರು. ಅವರ ಅವಧಿ ಒಂದು ವರ್ಷ. ಚುನಾವಣೆಗೆ ನಿಲ್ಲುವ ಸದಸ್ಯರ ಅರ್ಹತೆ ಹೆಚ್ಚು ಕಡಿಮೆ ಗ್ರಾಮದ ಪಂಚಾಯಿತಿ ಚುನಾವಣೆಯಂತೆ.

ಜಿಲ್ಲಾ ಪಂಚಾಯಿತಿ : ಪ್ರತಿಯೊಂದು ಜಿಲ್ಲೆಗೂ ಒಂದು ಜಿಲ್ಲಾ ಪಂಚಾಯಿತಿ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಆಯಾ ಜಿಲ್ಲೆಯ ತಾಲ್ಲೂಕುಗಳು ಸೇರುವುವು.

ನಲವತ್ತು ಸಾವಿರ ಪ್ರಜಾಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಪ್ರತಿನಿಧಿ. ಕೊಡಗು, ಉತ್ತರಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಿಗೆ ವಿನಾಯಿತಿ ಉಂಟು. ಅಲ್ಲಿ ಪ್ರತಿ ಮೂವತ್ತು ಸಾವಿರ ಮಂದಿಗೆ ಒಬ್ಬ ಪ್ರತಿನಿಧಿ.

ಜಿಲ್ಲಾ ಪಂಚಾಯಿತಿಗೆ ಆಯ್ಕೆ ಇತರ ಸಾರ್ವತ್ರಿಕ ಚುನಾವಣೆಯಂತೆ. ಅವುಗಳ ವಿಷಯ ಮುಂದೆ ತಿಳಿಸುವೆ.

ವಿಧಾನ ಮಂಡಳಕ್ಕೆ ಚುನಾವಣೆ

ರಾಜ್ಯದ ಜನತೆಯ ಸುಖ, ಶಾಂತಿ, ಮುಂತಾದವುಗಳ ಕಡೆಗೆ ಗಮನ ನೀಡುವುದು ರಾಜ್ಯಸರಕಾರದ ಹೊಣೆ. ರಾಜ್ಯ ಮಟ್ಟದಲ್ಲಿ ಆಡಳಿತ ನಡೆಸಲು ವಿಧಾನ ಮಂಡಳ ಇದೆ. ವಿಧಾನ ಮಂಡಳದಲ್ಲಿ ಎರಡು ಸದನಗಳಿವೆ. ಒಂದು ವಿಧಾನ ಸಭೆ. ಇನ್ನೊಂದು ವಿಧಾನ ಪರಿಷತ್ತು. ಈ ಶಾಸನ ಸಭೆಗಳು ಪ್ರಜಾಭಿಪ್ರಾಯದ ಕನ್ನಡಿ ಇದ್ದ ಹಾಗೆ. ವಿಧಾನ ಸಭೆ ಕೆಳಮನೆ. ಅದಕ್ಕೆ ನೇರ ಚುನಾವಣೆ. ವಿಧಾನ ಪರಿಷತ್ತು ಮೇಲನೆ.

ನಮ್ಮಿಂದ ಆಯ್ಕೆ ಆದ ಕೆಳಮನೆ ಸದಸ್ಯರು ವಿಧಾನ ಪರಿಷತ್ತಿಗೆ ಸದಸ್ಯರನ್ನು ಆಯ್ಕೆ ಮಾಡುವರು. ಅವರಲ್ಲದೆ ಇತರ ಕ್ಷೇತ್ರಗಳಿಂದ ಆಯ್ಕೆ ಆದವರೂ ಉಂಟು. ಇದಕ್ಕೆ ಮೇಲ್ಮನೆ ಎಂದು ಹೆಸರು. ಮೇಲ್ಮನೆಯ ಪ್ರಾತಿನಿಧ್ಯ ಹೀಗಿದೆ.

೧ ಶಿಕ್ಷಣ ಕ್ಷೇತ್ರದಿಂದ ಆಯ್ಕೆ ಆದವರು.

೨ ಪದವೀಧರರಿಂದ ಆಯ್ಕೆ ಆದವರು.

೩ ಪುರಸಭೆ, ಕಾರ್ಪೋರೇಷನ್ ಮತ್ತು ಜಿಲ್ಲಾ ಪರಿಷತ್ತು ಸದಸ್ಯರಿಂದ ಆಯ್ಕೆ ಆದವರು.

೪ ನಾಮಕರಣ ಸದಸ್ಯರು

ಎಲ್ಲ ರಾಜ್ಯಗಳಲ್ಲಿ ವಿಧಾನ ಪರಿಷತ್ತುಗಳು ಇಲ್ಲ. ವಿಧಾನಸಭೆ ಮಾತ್ರ. ಅನೇಕ ರಾಜ್ಯಗಳಲ್ಲಿ ಇದೆ. ವಿಧಾನ ಪರಿಷತ್ ಸದಸ್ಯನಾಗಲು ಕನಿಷ್ಠ ವಯಸ್ಸು ಮೂವತ್ತು.

ವಿಧಾನ ಸಭೆಗೆ ಚುನಾವಣೆ : ಗುಪ್ತ ಮತದಾನ ಪದ್ಧತಿಯ ಪ್ರಕಾರ ಪ್ರತಿಯೊಬ್ಬ ಮತದಾರನಿಗೂ ಒಂದೇ ಓಟು. ಮತದಾನ ಮಾಡುವ ವಯಸ್ಸು ಹದಿನೆಂಟು. ವಿಧಾನ ಸಭಾ ಸದಸ್ಯನಾಗಲು ಕನಿಷ್ಠ ಇಪ್ಪತ್ತೈದು ವಯಸ್ಸು ಆಗಿರಬೇಕು. ಕರ್ನಾಟಕದಲ್ಲಿ ವಿಧಾನ ಸಭೆಯಲ್ಲಿ ಒಟ್ಟು ಸದಸ್ಯರ ಸಂಖ್ಯೆ ಇನ್ನೂರ ಇಪ್ಪತ್ನಾಲ್ಕು.

ವಿಧಾನ ಸಭೆಗೆ ನಿಲ್ಲಲು ಅರ್ಹತೆ

೧ ಭಾರತದ ಪ್ರಜೆ ಆಗಿರತಕ್ಕದ್ದು

೨ ಇಪ್ಪತ್ತೈದು ವಯಸ್ಸು ಆಗಿರಬೇಕು

೩ ಹುಚ್ಚ ಮತ್ತು ದಿವಾಳಿ ಆಗಿರಬಾರದು

೪ ಸರಕಾರದ ಲಾಭದಾಯಕ ಹುದ್ದೆಯಲ್ಲಿ ಇರಬಾರದು

ಸಂಸತ್ತಿನ ಚುನಾವಣೆ : ರಾಷ್ಟ್ರಮಟ್ಟದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳಿವೆ. ಇವೆರಡು ಸದನಗಳು ಸೇರಿ ಸಂಸತ್ ಎಂದು ಹೆಸರು. ಲೋಕಸಭೆ ಸಂಸತ್ತಿನ ಕೆಳಮನೆ.

ಇದಕ್ಕೆ ನೇರ ಚುನಾವಣೆ. ಅದಕ್ಕೆ ವಯಸ್ಕರಾದ ನಾವೆಲ್ಲರೂ ಓಟು ಮಾಡಬಹುದು. ಲೋಕಸಭೆ ರಾಷ್ಟ್ರ ಮಟ್ಟದ ಪ್ರಜಾ ಪ್ರತಿನಿಧಿ ಸಭೆ ಎಂದರೆ ತಪ್ಪಲ್ಲ. ಲೋಕ ಸಭಾ ಸದಸ್ಯರ ಸಂಖ್ಯೆ ಐನೂರಾ ನಲವತ್ತೈದು. ಕರ್ನಾಟಕದಲ್ಲಿ ಇಪ್ಪತ್ತೇಳು ಮಂದಿ ಲೋಕಸಭಾ ಸದಸ್ಯರು

ಎರಡು ಲಕ್ಷದಿಂದ ಐದು ಲಕ್ಷ ಪ್ರಜಾಸಂಖ್ಯೆ ಇರುವ ಕ್ಷೇತ್ರಕ್ಕೆ ಒಬ್ಬ ಲೋಕ ಸಭಾ ಪ್ರತಿನಿಧಿ.

ರಾಜ್ಯದಲ್ಲಿ ವಿಧಾನ ಪರಿಷತ್ ಇರುವಂತೆ ರಾಷ್ಟ್ರಮಟ್ಟದಲ್ಲಿ ರಾಜ್ಯ ಸಭೆ ಇದೆ. ಅದಕ್ಕೆ ನೇರ ಚುನಾವಣೆ ಇಲ್ಲ. ಇದು ಸಂಸತ್ತಿನ ಮೇಲ್ಮನೆ ಅದರ ಸದಸ್ಯರ ಸಂಖ್ಯೆ ಇನ್ನೂರಾ ಐವತ್ತು.

ಠೇವಣಿ ಹಣ ಸಲ್ಲಿಕೆ : ಲೋಕಸಭೆ ಮತ್ತು ವಿಧಾನ ಸಭೆಗೆ ನಿಲ್ಲುವ ಉಮೇದುವಾರರು ನಾಮಪತ್ರದೊಂದಿಗೆ ನಿಗದಿಯಾದ ಹಣವನ್ನು ಖಜಾನೆಗೆ ಠೇವಣಿ ರೂಪದಲ್ಲಿ ಸಲ್ಲಿಸಬೇಕು. ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡದವರಿಗೆ ಠೇವಣಿ ಬಗ್ಗೆ ರಿಯಾಯಿತಿ ಉಂಟು. ಠೇವಣಿ ಕೇಳಲು ಕಾರಣಗಳು ಹೀಗಿವೆ. ಉಮೇದುವಾರ ಚುನಾವಣೆಯನ್ನು ಲಘುವಾಗಿ ಕಾಣಬಾರದು. ಜೊತೆಗೆ ಆತನಿಗೆ ಅದರ ಹೊಣೆ ಅರಿಯಬೇಕು. ಚುನಾವಣೆಯಲ್ಲಿ ಮತ ಚಲಾಯಿಸಿದ ಸಂಖ್ಯೆಯಲ್ಲಿ ಎಂಟನೇ ಒಂದು ಭಾಗ ಮತಗಳು ಚುನಾವಣೆಗೆ ನಿಂತ ಉಮೇದುವಾರನಿಗೆ ಬರಬೇಕು. ಹಾಗೆ ಬಾರದಿದ್ದರೆ ಅವನ ಠೇವಣಿ ಸರಕಾರಕ್ಕೆ ಸೇರುವುದು.

" ನಮ್ಮ ಕಡೇಗೆ ಒಂದು ಮಾತು ಚಾಲ್ತಿ ಇದೆ. ನಿಮಗೆ ಆಗದವನನ್ನು ಪುಸಲಾಯಿಸಿ ಚುನಾವಣೆಗೆ ನಿಲ್ಲಿಸು. ಅದರ ಅರ್ಥವೇನು " ಕೇಳಿದ ಪುಟ್ಟಣ್ಣ.

ನೀವು ಕೇಳಿದ ಪ್ರಶ್ನೆ ಒಳ್ಳೆಯದು. ಅದರಲ್ಲಿ ಬಹಳ ಅರ್ಥ ಇದೆ. ಉದಾಹರಣೆಗೆ ಗ್ರಾಮಪಂಚಾಯಿತಿ ಚುನಾವಣೆ ಚಿಕ್ಕದು. ಅದರಿಂದ ಉಮೇದುವಾರ

ಮತದಾರನಿಗೆ ಪರಿಚಯ ಆಗಿರುವನು. ಆದರಿಂದ ಈ ಚುನಾವಣೆ ಎದುರಿಸಲು ಅಷ್ಟು ಹಣಬೇಕಿಲ್ಲ. ಆದರೂ ಈಗಿನ ಕಾಲದಲ್ಲಿ ಈ ಚುನಾವಣೆ ನಿಲ್ಲಲು ಸಾಕಷ್ಟು ಹಣ ಬೇಕೇ ಬೇಕು. ವಿಧಾನ ಪರಿಷತ್ತು ಮತ್ತು ಲೋಕಸಭಾ ಕ್ಷೇತ್ರಗಳು ದೊಡ್ಡವು. ಮತದಾರರು ಬಹುಮಂದಿ. ಉಮೇದುವಾರ ಎಲ್ಲರನ್ನೂ ಸಂಪರ್ಕಿಸಿಲು ಸಾಧ್ಯವಿಲ್ಲ. ಅದಕ್ಕೆ ಬಹಳ ಸಿಬ್ಬಂದಿ ಬೇಕು. ಸಾಕಷ್ಟು ಪ್ರಚಾರ ಅಗತ್ಯ. ಓಡಾಡಲು ವಾಹನ ಮತ್ತು ಜನಬೇಕು. ಅವರಿಗೆಲ್ಲಾ ಊಟ, ತಿಂಡಿ, ಕೊಟ್ಟು ಅವರನ್ನು ಸಂತೃಪ್ತಿಯಿಂದ ಇಡಬೇಕು. ಇದಕ್ಕೆಲ್ಲಾ ಅಪಾರ ಹಣಬೇಕು. ಅಂದರೆ ಲಕ್ಷಾಂತರ ಹಣ ಅಗತ್ಯ. ಇಷ್ಟೊಂದು ಹಣ ಖರ್ಚು ಮಾಡಲು ಉಮೇದುವಾರ ಶ್ರೀಮಂತ ಆಗಿರಬೇಡವೇ? ಹೀಗಾಗಿ ಅನೇಕ ವೇಳೆ ಯೋಗ್ಯರು. ಅರ್ಹರು, ದಕ್ಷರು, ಬುದ್ಧಿವಂತರು ಮತ್ತು ಬಡವರು ಚುನಾವಣೆಗೆ ನಿಲ್ಲಲು ಆಗದು. ಆಗ ಅಂತಹ ಉಮೇದುವಾರನ ಬೆಂಬಲಕ್ಕೆ ರಾಜಕೀಯ ಪಕ್ಷಗಳು ನಿಲ್ಲುತ್ತವೆ. ಆತನಿಗೆ ಧನ ಮತ್ತು ಜನ ಬಲ ನೀಡುತ್ತವೆ. ಕೆಲವು ವೇಳೆ ಹಣವಂತರೂ ಸಹ ಚುನಾವಣೆಗೆ ನಿಂತು ಸೋತು ಸುಣ್ಣ ಆಗುವರು. ಹೀಗಾಗಿ ಅವರು ಮೆತ್ತಗಾಗುವರು.

ಜನತೆ ಮತ ನೀಡುವುದು ಪಕ್ಷಕ್ಕೆ ಇಲ್ಲವೇ ವ್ಯಕ್ತಿಗೆ. ಆದ್ದರಿಂದ ರಾಜಕೀಯ ಪಕ್ಷಗಳು ಉಮೇದುವಾರನನ್ನು ಚುನಾವಣೆಗೆ ನಿಲ್ಲಿಸಲು ಎಚ್ಚರ ವಹಿಸುವುವು. ಅಷ್ಟೇ ಅಲ್ಲ. ಪಕ್ಷವು ನಿಷ್ಠೆಯಿಂದ ತನ್ನ ಪಕ್ಷದ ಧ್ಯೇಯ ಧೋರಣೆಗಳನ್ನು ಮತದಾರನಿಗೆ ಮನವರಿಕೆ ಮಾಡಿಕೊಡತಕ್ಕದ್ದು.

ಪ್ರಜಾಸತ್ತಾತ್ಮಕ ರಾಜ್ಯಗಳಲ್ಲಿ ಚುನಾವಣೆಯ ಸಂದರ್ಭದಲ್ಲಿ ಎರಡು ಕೊರತೆಗಳು ಪ್ರಧಾನವಾಗಿ ಕಾಣಬರುತ್ತವೆ. ಈ ಕೊರತೆಗಳು ಪರಿಸ್ಥಿತಿಯ ಆಳವಾದ ಅಧ್ಯಯನದಿಂದ ಕಂಡುಬಂದಿದೆ.

೧ ಮತದಾನದ ವಿಚಾರದಲ್ಲಿ ಅಜ್ಞಾನ ಮತ್ತು ಅನಾಸಕ್ತಿ

೨ ಬುದ್ಧಿಜೀವಿಗಳು ಚುನಾವಣೆಯನ್ನು ಲಘುವಾಗಿ ಕಾಣುವರು. ಅವರು

ಹೆಚ್ಚಾಗಿ ಇರುವುದು ನಗರ ಪ್ರದೇಶಗಳಲ್ಲಿ. ಆದ್ದರಿಂದ ಅಲ್ಲಿ ಓಟು ಮಾಡುವವರ ಸಂಖ್ಯೆ ಕಡಿಮೆ. ರಾಜಕೀಯ ಪಕ್ಷಗಳು ಚುರುಕಿನ ಪ್ರಚಾರ ಕೈಕೊಂಡು ಜನತೆಯನ್ನು ಜಾಗೃತಗೊಳಿಸುವವು.

ರಾಜಕೀಯ ಪಕ್ಷಗಳು ಹಲವಾರು ಮೂಲಗಳಿಂದ ಹಣ ಸಂಗ್ರಹಿಸುತ್ತವೆ. ಹಾಗೆ ಸಂಗ್ರಹಿಸಿದ ಹಣದ ಮೂಲವನ್ನು ಬಹಿರಂಗಪಡಿಸಬೇಕು. ಸಾವಿರದ ಒಂಬೈನೂರಾ ತೊಂಬತ್ತೆರಡರಲ್ಲಿ ಅಮೇರಿಕದಲ್ಲಿ ಅಧ್ಯಕ್ಷ ಚುನಾವಣೆ ನಡೆಯಿತಷ್ಟೆ. ಆಗ ನಾನು ಅಲ್ಲಿದ್ದೆ. ಚುನಾವಣೆ ಹಣ ಕೊಟ್ಟವರ ಹೆಸರು ಮತ್ತು ನೀಡಿದ ಹಣ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿತ್ತು. ಈ ರೀತಿ ಭಾರತದಲ್ಲಿ ನಡೆಯುವುದೆ ? ಹಾಗೆ ಪ್ರಕಟಿಸುವುದರಿಂದ ಜನತೆಗೆ ಯಾವ ಪಕ್ಷ ಯಾರ ಮತ್ತು ಎಂತಹ ಹಣದಿಂದ ಪೋಷಿತವಾಗಿದೆ ಎಂಬ ಅಂಶ ಮತದಾರನಿಗೆ ತಿಳಿಯುವುದು. ಅಂತಹ ಹಣದ ಬಳಕೆಯ ಮೇಲೆ ಹತೋಟಿ ಇರತಕ್ಕದ್ದು. ಹಾಗೂ ಲೆಕ್ಕ ಪತ್ರಗಳ ಪ್ರಕಟಣೆ ಕಡ್ಡಾಯ ಆಗಬೇಕು. ದೇಣಿಗೆಗಳ ಮೊತ್ತಕ್ಕೆ ಒಂದು ಗರಿಷ್ಟ ಮಿತಿ ಇರತಕ್ಕದ್ದು. ಭಾರತದ ಕೆಲವು ರಾಜ್ಯಗಳಲ್ಲಿ ಈ ಅಂಶಗಳು ಸ್ವಲ್ಪ ಮಟ್ಟಿಗೆ ಜಾರಿಗೆ ಬಂದಿವೆ. ಆದರೆ ಇಡೀ ರಾಷ್ಟ್ರದ ಎಲ್ಲ ರಾಜ್ಯಗಳಲ್ಲಿ ಇದು ಪರಿಣಾಮಕಾರಿಯಾಗಿ ಬಳಕೆಗೆ ಬರತಕ್ಕದ್ದು." ಹೀಗೆ ಹೇಳಿ ರಂಗಣ್ಣ ಸಭೆಗೆ ತನ್ನ ಕೃತಜ್ಞತೆಯನ್ನು ಅರ್ಪಿಸಿದ.

ರಹೀಂ ಎದ್ದು ಹೀಗೆ ಹೇಳಿದ " ನಮಗೆ ಚುನಾವಣೆ ವಿಚಾರದಲ್ಲಿ ಅನೇಕ ವಿಷಯಗಳು ಗೊತ್ತಿರಲಿಲ್ಲ. ತಾವು ಎಲ್ಲವನ್ನೂ ವಿವರವಾಗಿ ತಿಳಿಸಿದಿರಿ. ನಾವು ಈ ಬಗ್ಗೆ ಸಾಕಷ್ಟು ತಿಳಿವಳಿಕೆ ಪಡೆದಿದ್ದೇವೆ. ಸಭಿಕರ ಪರವಾಗಿ ನಿಮಗೆ ನಮಸ್ಕಾರಗಳು" ಎಂದು ಹೇಳಿ ರಂಗಣ್ಣನಿಗೆ ಮಾಲೆಯನ್ನು ಅರ್ಪಿಸಿದ.

* * *

ಕನ್ನಡ ವಿಶ್ವವಿದ ... ಟ್ಟದವರೆಗೆ ಉತ್ತಮ
ಹಾಗೂ ಉಪ ... 'ಪಠ್ಯಪುಸ್ತಕ ರಚನಾ
ವಿಭಾಗ'ವನ್ನು ... ಪಠ್ಯಪುಸ್ತಕ ರಚನೆ
ಮಾಡಬೇಕೆಂದು ... ವೆ. ನವಸಾಕ್ಷರರಿಗಾಗಿ
ಪುಸ್ತಕ ಬರೆಸು ... ಕ್ಕೆ ವಹಿಸಿಕೊಟ್ಟರು.
ವಿಶ್ವವಿದ್ಯಾಲಯ ... ಖ್ಯಾತ ಲೇಖಕರನ್ನು,
ಭಾಷಾತಜ್ಞರನ್ನು ... ರೆಲ್ಲರ ಅಭಿಪ್ರಾಯ,
ಸಲಹೆ, ಸಹಕಾರ ... ಮುದ್ರಣ ವಿನ್ಯಾಸ,
ಚಿತ್ರಗಳ ಮಹ ... ನೇಕ ಸಲ ಚರ್ಚಿಸಿ
ಯೋಜನೆಯನ್ನು ...

ನವಸಾಕ್ಷರರಿಗಾಗಿ ... ಪ್ರಕಟವಾಗಿರುವ
ಪುಸ್ತಕಗಳನ್ನೆಲ್ಲ ... ಭಾಷಾತಜ್ಞರಿಂದ
ಪರಿಶೀಲಿಸಲಾಯಿ ... ಸಿಕೊಂಡು ಅವರಿಗೆ
ಕಮ್ಮಟಗಳನ್ನು ... ತ ಆಯ್ದ ಜಿಲ್ಲೆ,
ತಾಲೂಕುಗಳಿಗೆ ... ಸುವವರಿಂದ ಅದರ
ಗುಣದೋಷಗಳ ... ವಿಶ್ವವಿದ್ಯಾಲಯದ
ಗಣಕಯಂತ್ರದಲ್ಲಿ ... ಾಯಕರು ನೀಡಿದ್ದ
ಮಾಹಿತಿಗಳನ್ನೆಲ್ಲ ... ಣವಾಗಿ ವಿಷಯದ
ಆದ್ಯತೆಗಳನ್ನು ನಿ ... ಲೇಖಕರು ನಮ್ಮ
ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಓದಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು